'ಸರಿ, ಅದರಲ್ಲಿ ಮಾಡೆಲ್‌ಗಳಿಗೆ ಒಂದಿಷ್ಟು ಭಾಗ ದೊರಕಲೇಬೇಕು ಎಂದು ಕೂಗಿಕೊಂಡು, ನಗುತ್ತಿದ್ದ ಹಗಿ 'ಅವರು ನಿಮ್ಮಷ್ಟೇ ಕಷ್ಟಪಟ್ಟಿರುತ್ತಾರೆ' ಎಂದನು.

ಆ ಮಾತು ದಡ್ಡತನವೇ ಸರಿ, ಇಡೀ ದಿನವೆಲ್ಲಾ ಒಬ್ಬನು ನಿಂತುಕೊಂಡೇ ಮಾಡುವ ಬಣ್ಣ ಹಚ್ಚುವ ಕೆಲಸವೊಂದರ ತೊಂದರೆಯನ್ನು ಗಮನಿಸು. ಮಾತಾಡುವುದು ಬಹಳ ಸುಲಭ. ಹಗೀ, ಕಲೆಯೂ ಕೂಡ ಬಹುಮಟ್ಟಿಗೆ ದೈಹಿಕ ಶ್ರಮದ ಮಹತ್ವವನ್ನೇ ಪಡೆದುಕೊಳ್ಳುವ ಕ್ಷಣಗಳಿವೆ. ಆದರೆ ನೀನೀಗ ಮಾತಾಡಬೇಡ; ನನಗೆ ತುಂಬಾ ಕೆಲಸವಿದೆ. ಒಂದು ಸಿಗರೇಟು ಸೇದುತ್ತಾ ಸುಮ್ಮನೇ ಕೂತುಕೋ' ಸ್ವಲ್ಪ ಹೊತ್ತಿನ ನಂತರ ಸೇವಕ ಒಳಕ್ಕೆ ಬಂದು, 'ಫ್ರೇಮ್ ತಯಾರಿಸುವವನು ಟ್ರೆವರ್ ಬಳಿ ಮಾತಾಡಬೇಕಂತೆ' ಎಂದು ಹೇಳಿ ಹೋದನು. 'ಹಗಿ ಎಲ್ಲೂ ಹೋಗಬೇಡ, ಬೇಗ ಬಂದುಬಿಡುತ್ತೇನೆ' ಎಂದು ಟ್ರೆವರ್ ಹೊರಕ್ಕೆ ಹೋದನು.

ಟ್ರೆವರ್ ಹೊರಗೆ ಹೋಗಿದ್ದನ್ನು ಆ ಭಿಕ್ಷುಕ ಮುದುಕ ತನ್ನ ಅನುಕೂಲವಾಗಿಸಿಕೊಂಡು. ತನ್ನ ಹಿಂದೇ ಇದ್ದ ಮರದ ಬೆಂಚಿನ ಮೇಲೆ ವಿಶ್ರಾಂತಿ ಪಡೆಯತೊಡಗಿದನು. ಆತ ತೀರಾ ಹತಾಶೆಯವನಾಗಿ ಕ್ಷುದ್ರನಂತೆ ಕಾಣಿಸಿ, ಹಗಿ ಕನಿಕರಕ್ಕೊಳಗಾಗಿ, ತನ್ನ ಜೇಬುಗಳಲ್ಲಿ ಹಣವೇನಾದರೂ ಇದೆಯೇ ಎಂದು ನೋಡಿದನು. ಹಗೀ ಬಳಿ ಇದ್ದುದೆಲ್ಲ ಒಂದು ಸವರನ್ ಮತ್ತು ಕೆಲವು ಬಿಡಿಗಾಸುಗಳು. 'ಅಯ್ಯೋ ಬಡ ಮುದುಕನೇ' ಎಂದು ತನ್ನಲ್ಲೇ ತಾನು ಯೋಚಿಸಿಕೊಂಡು 'ನಾನು ಅಂದುಕೊಳ್ಳುವುದಕ್ಕಿಂತ ಆತನಿಗೆ ಹೆಚ್ಚೇ ಬೇಕಾಗಿದೆ. ಆದರೆ ಎರಡು ವಾರಗಳ ಕಾಲ ನನಗೇ ಏನೂ ಇರುವುದಿಲ್ಲವಲ್ಲ' ಎಂದುಕೊಂಡ ಹಗಿ ಸ್ಟುಡಿಯೋ ಉದ್ದಕ್ಕೂ ಓಡಾಡಿ, ಸವರನ್ನನ್ನು ಭಿಕ್ಷುಕನ ಕೈಗೆ ತುರುಕಿದನು.

ಆ ಮುದುಕನ ಒಣಗಿದ ತುಟಿಗಳ ಉದ್ದಕ್ಕೂ ಒಂದು ಎಳೆಯ ನಗು ಹಾದುಹೋಯಿತು. 'ವಂದನೆಗಳು ಮಹಾಶಯರೆ ವಂದನೆಗಳು' ಎಂದು ಆತ ಹೇಳಿದನು.

ಆ ಮೇಲೆ ಟ್ರೆವರ್ ಬಂದಾಗ, ಹಗಿ ತಾನು ಮಾಡಿದ್ದರ ಬಗ್ಗೆ ಸ್ವಲ್ಪ ನಾಚಿಕೊಂಡು ಅಲ್ಲಿಂದ ಹೊರಟನು. ಅವನು ಉಳಿದ ದಿನವನ್ನು ಲಾರಾ ಜೊತೆ ಕಳೆಯುವಾಗ, ತಾನು ಮಾಡಿದ ದುಂದುವೆಚ್ಚದ ಬಗ್ಗೆ ಮೆಚ್ಚುಗೆಯ ಬೈಗುಳ ಸ್ವೀಕರಿಸಿ ಮನೆಗೆ ಹೋದನು.

ಆ ರಾತ್ರಿ ಹನ್ನೊಂದು ಗಂಟೆಯ ಹೊತ್ತಿಗೆ ಆತ ಪ್ಯಾಲೆಟ್ ಕ್ಲಬ್ಬಿನೊಳಕ್ಕೆ ನುಗ್ಗಿದನು. ಅಲ್ಲಿ ಟ್ರೆವರ್ ಧೂಮಪಾನ ಕೊಠಡಿಯಲ್ಲಿ ಕುಳಿತು ವೈನ್ ಕುಡಿಯುತ್ತಿರುವುದನ್ನು ಕಂಡನು.

'ಟ್ರೆವರ್, ನೀನು ಚಿತ್ರವನ್ನು ಮುಗಿಸಿ ಆಯಿತೆ? ಎಂದು ಹಗಿ ಪ್ರಶ್ನಿಸುತ್ತಾ ಸಿಗರೇಟ್ ಹಚ್ಚಿಕೊಂಡನು.

'ಅದು ಮುಗಿದೂ ಆಯಿತು, ಅದಕ್ಕೆ ಫ್ರೇಮೂ ಆಯಿತು' ಎಂದು ಉತ್ತರಿಸಿದ ಟ್ರೆವರ್, 'ಅದೆಲ್ಲಾ ಸರಿ, ನೀನೊಂದು ವಿಜಯವನ್ನೇ ಸಾಧಿಸಿದ್ದೀಯಲ್ಲ. ನೀನು ನೋಡಿದ ಆ ಮುದುಕ ಮಾಡೆಲ್ ನಿನ್ನ ಆರಾಧಕನಾಗಿಬಿಟ್ಟಿದ್ದಾನೆ. ನಾನು ಆತನಿಗೆ ನಿನ್ನ ವಿಷಯವೆಲ್ಲವನ್ನೂ ಹೇಳಬೇಕಾಯಿತು. ನೀನೇನು, ನಿನ್ನ ವಾಸ ಎಲ್ಲಿ, ನಿನ್ನ ಆದಾಯವೇನು, ನಿನ್ನ ಭವಿಷ್ಯವೇನು...'

'ಪ್ರಿಯ ಸ್ನೇಹಿತನೇ' ಎಂದು ಹಗಿ ಕೂಗಿಕೊಳ್ಳುತ್ತಾ ನೀನು ತಮಾಷೆ ಮಾಡುತ್ತಿರುವುದನ್ನು ನೋಡಿದರೆ, ನಾನು ಮನೆಗೆ ಹೋಗುವ ಹೊತ್ತಿಗೆ ಆತ ನನಗೋಸ್ಕರ ಕಾಯುತ್ತಿರಬಹುದು. ಆ ಮುದುಕ ತೀರಾ ದೈನ್ಯಸ್ಥಿತಿಯವನು. ಆತನಿಗೆ ಏನಾದರೂ ಮಾಡಬೇಕೆಂದೆನ್ನಿಸುತ್ತದೆ. ಅಷ್ಟು ಸಂಕಷ್ಟದಲ್ಲಿ ಯಾರೇ ಇರಲಿ, ಅದು ಭಯಾನಕವೆನಿಸುತ್ತದೆ ನನಗೆ. ನನ್ನ ರಾಶಿ ರಾಶಿ ಹಳೆಯ ಬಟ್ಟೆಗಳು ಮನೆಯಲ್ಲಿವೆ. ಆತ ಅವುಗಳನ್ನು ಇಷ್ಟಪಡಬಹುದೆಂದು ನಿನಗೆ ಅನ್ನಿಸುತ್ತದೆಯೇ?